ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ 57)
ನಮೂನೆ ಸಂಖ್ಯೆ 4

ಸಿ ಆರ್ ಪಿ 67

## ಪ್ರಧಾನ ಜೆ ಎಂ ಎಫ್ ಸಿ ನ್ಯಾಯಾಲಯ ಸಿಂಧನೂರು

ಸಿ ಸಿ ಸಂಖ್ಯೆಃ 447/2015 CW-1 PW- 1

| | |
|---|---|
| ಹೆಸರು | ಕೆ. ಹೊಸಗೇರಪ್ಪ |
| ತಂದೆಯ ಹೆಸರು | ಈರಪ್ಪ @ ಈರಣ್ಣ |
| ವಯಸ್ಸು | 76 |
| ಉದ್ಯೋಗ | ನಿವೃತ್ತ ಸೂಪರ್‌ವೈಸರ್ ಸದ್ಯ ಒಕ್ಕಲುತನ |
| ವಾಸ ಸ್ಥಳ | ಸುಕಾಲ್‌ಪೇಟೆ, ಸಿಂಧನೂರು. |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕ ಃ 29-10-2021

### ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ

1974ರಲ್ಲಿ ನನ್ನ ತಂದೆ ಸಿಂಧನೂರು ಗ್ರಾಮದ ಸರ್ವೆ ನಂ. 758/1 ವಿಸ್ತೀರ್ಣ 1 ಎಕರೆ ಜಮೀನನ್ನು ಖರೀದಿ ಮಾಡಿದ್ದರು. ಅವರು ಅವಿದ್ಯಾವಂತ ಆಗಿದ್ದರಿಂದ ರೆಜಿಸ್ಟ್ರೇಶನ್ ಮಾಡಿಸಿರಲಿಲ್ಲ. ಅವರು ತೀರಿಕೊಂಡ ನಂತರ ನಾನು ಸದರಿ ಜಮೀನನ್ನು ಮೋತಿ ವೀರಸಾತ್ ಅಂತಾ ನನ್ನ ಹೆಸರಿನಲ್ಲಿ ಮಾಡಿಕೊಂಡಿದ್ದೇನೆ. 2002 ರಲ್ಲಿ ನಾನು ಸದರಿ ಜಮೀನನ್ನು ನನ್ನ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತೇನೆ. 2012ರಲ್ಲಿ 1ನೇ ಶಂಕ್ರಪ್ಪ ತಂ. ಹನುಮಂತಪ್ಪ, ಹಿರೇಲಿಂಗಪ್ಪ ಮತ್ತು ಶರಣಪ್ಪ ಮೂರು ಜನ ಬಂದು ಸದರಿ ಜಮೀನು ನಮ್ಮದು ಇದೆ ಅಂತಾ ನಮಗೆ ತಕರಾರು ಮಾಡಿದರು. ನಾನು ನಿರ್ಬಂಧಕಾಜ್ಞೆಗಾಗಿ ನ್ಯಾಯಾಲಯಕ್ಕೆ ಸಿವಿಲ್ ವ್ಯಾಜ್ಯ ಹೂಡಿರುತ್ತೇನೆ. ನ್ಯಾಯಾಲಯವು ಅವರ ವಿರುದ್ಧ ನಿರ್ಬಂಧಕಾಜ್ಞೆಯನ್ನು ಜಾರಿ ಮಾಡಿರುತ್ತದೆ. ಸದರಿ ದಾವೆಯು ಇನ್ನೂ ಸಹ ಚಾಲ್ತಿಯಲ್ಲಿರುತ್ತದೆ. ನಂತರ 1ನೇ ಆರೋಪಿ ಶಂಕ್ರಪ್ಪ ನಮ್ಮ ಹೊಲಕ್ಕೆ ಸಂಬಂಧಪಟ್ಟ ದಾಖಲೆಗಳಲ್ಲಿ ಕಂದಾಯ ಇಲಾಖೆಯಲ್ಲಿ ನನ್ನ ಹೆಸರನ್ನು ತೆಗೆಸಿ ದಿ: 06-06-2012ರಂದು ಸದರಿ ಜಮೀನನ್ನು ತನ್ನ ಹೆಸರಿನಲ್ಲಿ ಮಾಡಿಕೊಂಡಿರುತ್ತಾನೆ. ನಂತರ ಅಕ್ಬರ್ ಅಲಿ 3ನೇ ಆರೋಪಿ ಈತನಿಗೆ ತನ್ನ ಕಡೆಯಿಂದ ಸ್ಟಾಂಪ್ ಬರೆದುಕೊಟ್ಟಿರುತ್ತಾನೆ. ಸದರಿ 3ನೇ ಆರೋಪಿ ಆ ಸ್ಟಾಂಪ್‌ನ ಆಧಾರದ ಮೇಲೆ 2ನೇ ಆರೋಪಿ ಮಾರುಫ್ ಈತನಿಗೆ ದಿ: 14-03-2013 ರಂದು ಖೊಟ್ಟಿಯಾಗಿ ರೆಜಿಸ್ಟ್ರೇಶನ್ ಮಾಡಿಸಿಕೊಟ್ಟಿರುತ್ತಾನೆ. ಅದಾದನಂತರ ಅದು ನನಗೆ ಗೊತ್ತಾಗಿ ನಾನು ಉಪವಿಭಾಗಾಧಿಕಾರಿಗಳು, ಲಿಂಗಸುಗೂರು ಇವರ ಮುಂದೆ ಅಪೀಲು ಮಾಡಿರುತ್ತೇನೆ. ಉಪ ವಿಭಾಗಾಧಿಕಾರಿಗಳು ಸದರಿ ಮೇಲ್ಮನವಿಯನ್ನು ಪುರಸ್ಕರಿಸಿ ಸದರಿ ಜಮೀನನ್ನು ಮತ್ತೇ ನನ್ನ ಹೆಸರಿನಲ್ಲಿ ಮುಟೇಶನ್ ಮಾಡುವಂತೆ ಆದೇಶ ಮಾಡಿದರು. ಅದು ನನ್ನ ಹೆಸರಿನಲ್ಲಿ ಆಗಿರುತ್ತದೆ. ದಿ: 25-01-2014ರಂದು ನನ್ನ ಹೆಸರಿನಲ್ಲಿ ಸದರಿ ಜಮೀನು ವರ್ಗಾವಣೆ ಆಗಿರುತ್ತದೆ. ಸದರಿ ದಿ: 25-01-2014 ರಿಂದ ಸದರಿ ಜಮೀನಿಗೆ ನಾನೇ ಕಬ್ಜೆಯಲ್ಲಿ ಇರುತ್ತದೆ. ನಂತರ ನಾನು ಪೋಲೀಸ್ ಠಾಣೆಗೆ ಹೋದೆ ಅವರು ದೂರು ತೆಗೆದುಕೊಳ್ಳಲಿಲ್ಲ, ಆದ್ದರಿಂದ ನ್ಯಾಯಾಲಯಕ್ಕೆ ಬಂದು ದೂರು ಸಲ್ಲಿಸಿದ್ದೇನೆ.

ಸಿ ಸಿ ಸಂಖ್ಯೆಃ 447/2015
CW-1 PW- 1

ಈಗ ನಾನು ನೋಡುತ್ತಿರುವ ಸಹಿ ನನ್ನದೇ ಇರುತ್ತದೆ. ಅದು ನಾನು ನ್ಯಾಯಾಲಯದಲ್ಲಿ ಮಾಡಿರುವ ಸಹಿ ಆಗಿರುತ್ತದೆ. ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1(ಎ) ಎಂದು ಗುರುತಿಸಲಾಯಿತು.

ಕೋರ್ಟ್‌ನಲ್ಲಿ ದೂರು ಸಲ್ಲಿಸಿದ ನಂತರ ಪೋಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ.

ಈ ಹಂತದಲ್ಲಿ ತನಿಖಾಧಿಕಾರಿ ಮೂಲ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಸ.ಸ.ಅ. ಅವರು ದಾಖಲೆಗಳನ್ನು ಹಾಜರುಪಡಿಸಲು ಆದೇಶಿಸಿ ಕಾಲಾವಕಾಶ ನೀಡುವಂತೆ ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ,

ಪ್ರಧಾನ ಜೆ.ಮ್.ಎಫ್.ಸಿ. ಸಿಂಧನೂರು.